# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಜಿಲ್ಲಾ ಪಂಚಾಯತ್ ಚುನಾಯಿತ ಅಧ್ಯಕ್ಷರುಗಳಿಗೆ 2017-18ನೇ ಆರ್ಥಿಕ ಸಾಲಿನ ಏಪ್ರಿಲ್-2017ರ ಮಾಹೆಯಿಂದ ಜೂನ್-2017 ಮಾಹೆ ವರೆಗಿನ ಅವಧಿಗೆ ಮಾಸಿಕ ಗೌರವಧನ ಹಾಗೂ ಇತರೆ ಉಪಲಬ್ಧಗಳನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ,**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 75 ಜಿಪಸ 2016, ದಿನಾಂಕ:19-11-2016.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 149 ಕೆಎಸ್ಎಸ್ 2016, ದಿನಾಂಕ:24-09-2016.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 296 ಕೆಎಸ್ಎಸ್ 2016, ದಿನಾಂಕ:17-01-2017.

**ಪ್ರಸ್ತಾವನೆ:**

ಮೇಲೆ ಓದಲಾದ ಆದೇಶದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ತಿದ್ದುಪಡಿ ಅಧಿನಿಯಮ 2015ರ ಕಂಡಿಕೆ 46ರಲ್ಲಿನ ಸೆಕ್ಷನ್ 178ರಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ರಾಜ್ಯ ಸಚಿವರ ಸ್ಥಾನಮಾನ ಕಲ್ಪಿಸಿರುವುದರಿಂದ ಅವರುಗಳಿಗೆ ಪ್ರಾಪ್ತವಾಗುವ ಸೌಲಭ್ಯಗಳ ಬಗ್ಗೆ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ 2ರ ಸರ್ಕಾರದ ಆದೇಶದಲ್ಲಿ ಈಗಾಗಲೇ ವಾಹನ ಸೌಲಭ್ಯ ರೂ.11.00ಲಕ್ಷಗಳನ್ನು ಆಯಾಯ ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ. ಮುಂದುವರೆದು, ರೂ.11.00ಲಕ್ಷಗಳ ಆರ್ಥಿಕ ಮಿತಿಯೊಳಗೆ ಹೊಸ ವಾಹನವನ್ನು ಖರೀದಿಸಲು ಮಂಜೂರಾತಿ ನೀಡಲಾಗಿದ್ದ ಗರಿಷ್ಠ ಮಿತಿಯನ್ನು ಉಲ್ಲೇಖ (3)ರ ಆದೇಶದಲ್ಲಿ ರೂ.16.00ಲಕ್ಷಕ್ಕೆ ಪರಿಷ್ಕರಿಸಿ ಆದೇಶಿಸಲಾಗಿದೆ. ಅದರಂತೆ, ಜಿಲ್ಲಾ ಪಂಚಾಯತ್‌ನಲ್ಲಿ ಲಭ್ಯವಿರುವ ಅನುದಾನದಿಂದ ರೂ.16.00 ಲಕ್ಷಗಳಲ್ಲಿ ವಾಹನ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ ಹಾಗೂ ಅದರಡಿ ರಚಿಸಿರುವ ನಿಯಮಗಳನ್ನು ಪಾಲಿಸತಕ್ಕದ್ದು.

2017-18ನೇ ಸಾಲಿನ ಆರ್ಥಿಕ ಇಲಾಖೆಯ ಲೆಕ್ಕ ಶೀರ್ಷಿಕೆ:2515-00-196-1-05-300(ಯೋಜನೇತರ) ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ:2515-00-101-0-35-324 ರಡಿ ರೂ.756.07 ಲಕ್ಷಗಳನ್ನು ಒದಗಿಸಲಾಗಿದ್ದು ಸದರಿ ಅನುದಾನದಲ್ಲಿ ಪ್ರಸ್ತುತ ಏಪ್ರಿಲ್-2017 ರಿಂದ ಹಾಗೂ ಜೂನ್-2017ರ ತಿಂಗಳಿಗೆ ಒಟ್ಟು ರೂ.2,98,20,000( ಎರಡು ಕೋಟಿ ತೊಂಬತ್ತೆಂಟು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದ್ದು ವಿವರಗಳು ಈ ಕೆಳಕಂಡಂತಿದೆ.

| ಕ್ರಮ. ಸಂ | ವಿವರ | ಭತ್ಯೆ |
|---|---|---|
| 1. | ಗೌರವಧನ | ರೂ.35,000.00 |
| 2. | **ಮನೆ ಬಾಡಿಗೆ**<br>ಬೆಂಗಳೂರು | ರೂ.20,000.00 |
| | ರಾಜ್ಯದ ಇತರೆ | ರೂ.15,000.00<br>(ಲೋಕೋಪಯೋಗಿ ಇಲಾಖೆಯ ಮೌಲ್ಯಮಾಪನಕ್ಕೆ ಒಳಪಟ್ಟು ಬೆಂಗಳೂರು ನಗರದಲ್ಲಿ ಮಾಸಿಕ ರೂ.40,000 ಹಾಗೂ ಇತರೆ ನಗರಗಳಲ್ಲಿ ಮಾಸಿಕ ರೂ.20,000 ಗರಿಷ್ಠ ಮನೆ ಬಾಡಿಗೆಯನ್ನು ಪಡೆಯಬಹುದಾಗಿದೆ.) |

| | | |
|---|---|---|
| 3. | ಆತಿಥ್ಯ ಭತ್ಯೆ (ವಾರ್ಷಿಕ) | ರೂ.2,00,000.00 |
| 4. | ಇಂಧನ ವೆಚ್ಚ (ಮಾಹೆಯಾನ) | 550 ಲೀ |
| 5. | ದಿನ ಭತ್ಯೆ | ರಾಜ್ಯದ ಒಳಗೆ ದಿನ ಒಂದಕ್ಕೆ ರೂ.2,000(ಪ್ರತಿ ತಿಂಗಳಿಗೆ 20 ದಿನ ಮೀರದಂತೆ) ರಾಜ್ಯದ ಹೊರಗೆ ದಿನ ಒಂದಕ್ಕೆ ರೂ.2,500. (ಅವಶ್ಯವಿದ್ದಲ್ಲಿ ಮಾತ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು) |
| 6. | ದೂರವಾಣಿ | ಒಂದು ನಿವಾಸ ದೂರವಾಣಿಯನ್ನು ಅಧ್ಯಕ್ಷರ ಸ್ವಂತ ನಿವಾಸದಲ್ಲಿ/ಬಾಡಿಗೆ ಪಡೆದ ನಿವಾಸದಲ್ಲಿ. |
| 7. | ಆಪ್ತ ಸಿಬ್ಬಂದಿ | ರಾಜ್ಯ ಸಚಿವರಿಗೆ ನೀಡಲಾಗುವ ಮಾದರಿಯಲ್ಲಿ. |

ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳಿಗೆ ಗೌರವಧನ ಮತ್ತು ಇತರೆ ಉಪಲಬ್ಧಗಳನ್ನು ಏಪ್ರಿಲ್-2017 ರಿಂದ ಜೂನ್-2017ರ ತಿಂಗಳ ವರೆಗೆ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಣಯಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 146 ಜಿಪಸ 2017, ಬೆಂಗಳೂರು, ದಿನಾಂಕ:03-05-2017.**

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲು ಸರ್ಕಾರವು ಆದೇಶಿಸಿದೆ.

2017-18ನೇ ಆರ್ಥಿಕ ಸಾಲಿನ ಏಪ್ರಿಲ್-2017ರ ಮಾಹೆಯಿಂದ ಜೂನ್-2017ರ ಮಾಹೆವರೆಗೆ ಮಾಸಿಕ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಲು ಲೆಕ್ಕ ಶೀರ್ಷಿಕೆ:**2515-00-196-1-05-300(2515-00-101-0-35-324)**(ಯೋಜನೇತರ)ರಡಿ ರೂ.2,98,20,000( ಎರಡು ಕೋಟಿ ತೊಂಬತ್ತೆಂಟು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳಿಗೆ ಬಿಡುಗಡೆಗೊಳಿಸಿರುವ ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧ- 1ರಲ್ಲಿ ನೀಡಿದೆ. ಜಿಲ್ಲಾವಾರು ಗೌರವಧನ ಇತರೆ ಉಪಲಬ್ಧಗಳನ್ನು ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್-ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್)ಕೋಡ್‌ಗಳಿಗೆ ರಾಜ್ಯ ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು (ಟಿ.ಎನ್.ಎಮ್.ಸಿ) ಮೂಲಕ ಅಪ್‌ಲೋಡ್ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅನುಮತಿಸಿದೆ.

**ಮಾಸಿಕ ಗೌರವಧನ ಮತ್ತು ಇತರೆ ಉಪಲಬ್ಧಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಪಾವತಿಸುವುದು.**

1) ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವ ಆಯಾ ಜಿಲ್ಲೆಗಳ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್) ಕೋಡ್‌ಗಳಿಗೆ ಅಪ್‌ಲೋಡ್ ಮಾಡಿರುವುದರಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಖಜಾನೆಯಿಂದ ತಮ್ಮ ತಮ್ಮ ಮೊತ್ತಗಳನ್ನು ಸೆಳೆಯುವುದು.

2) ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ ಮೊತ್ತಗಳನ್ನು ಲೆಕ್ಕಹಾಕಿ ಅಂತಹ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ

ಬ್ಯಾಂಕ್ ಉಳಿತಾಯ ಖಾತೆಗಳಿಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಿ ಚುನಾಯಿತ ಅಧ್ಯಕ್ಷರುಗಳಿಗೆ ಮಾಸಿಕ ಗೌರವಧನ ಹಾಗೂ ಇತರೆ ಉಪಲಬ್ಧಗಳನ್ನು ಪಾವತಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಚುನಾಯಿತ ಅಧ್ಯಕ್ಷರುಗಳಿಗೆ ಏಪ್ರಿಲ್-2017ರ ಮಾಹೆಯಿಂದ ಜೂನ್-2017ರ ಮಾಹೆಗೆ ಮಾಸಿಕ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ನಿಯಮಾನುಸಾರ ಪಾವತಿಸಲು ಮಾತ್ರ ವಿನಿಯೋಗಿಸುವುದು. ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2017, ದಿನಾಂಕ: 05-04-2017ರಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/5/2017
(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

3.5.17

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
5. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
6. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
8. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
9. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಅನುಬಂಧ - 1

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರುಗಳಿಗೆ 2017-18ನೇ ಆರ್ಥಿಕ ಸಾಲಿನ ಏಪ್ರಿಲ್, ಮೇ ಮತ್ತು ಜೂನ್-2017ರ ಮಾಹೆಯ ಅವಧಿಗೆ ನೀಡಬೇಕಾಗಿರುವ ಗೌರವಧನ ಮತ್ತು ಇತರೆ ಉಪಲಬ್ದ ವಿವರಗಳು

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 146 ಜಿಪಸ 2017, ಬೆಂಗಳೂರು, ದಿನಾಂಕ:03-05-2017

(ರೂ. ಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ಮೂರು ತಿಂಗಳಿಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ ಗೌರವಧನ ಮತ್ತು ಉಪಲಬ್ದಗಳು |
|---|---|---|---|
| 1 | ಬೆಂಗಳೂರು ನಗರ | 1 | 1050000 |
| 2 | ಬೆಂಗಳೂರು ಗ್ರಾಮಾಂತರ | 1 | 1050000 |
| 3 | ರಾಮನಗರ | 1 | 990000 |
| 4 | ಕೋಲಾರ | 1 | 990000 |
| 5 | ಚಿಕ್ಕಬಳ್ಳಾಪುರ | 1 | 990000 |
| 6 | ತುಮಕೂರು | 1 | 990000 |
| 7 | ಚಿತ್ರದುರ್ಗ | 1 | 990000 |
| 8 | ದಾವಣಗೆರೆ | 1 | 990000 |
| 9 | ಶಿವಮೊಗ್ಗ | 1 | 990000 |
| 10 | ಮೈಸೂರು | 1 | 990000 |
| 11 | ಚಾಮರಾಜನಗರ | 1 | 990000 |
| 12 | ಹಾಸನ | 1 | 990000 |
| 13 | ಕೊಡಗು | 1 | 990000 |
| 14 | ಮಂಡ್ಯ | 1 | 990000 |
| 15 | ಚಿಕ್ಕಮಗಳೂರು | 1 | 990000 |
| 16 | ಉಡುಪಿ | 1 | 990000 |
| 17 | ದಕ್ಷಿಣ ಕನ್ನಡ | 1 | 990000 |
| 18 | ಬೆಳಗಾವಿ | 1 | 990000 |
| 19 | ವಿಜಯಪುರ | 1 | 990000 |
| 20 | ಬಾಗಲಕೋಟೆ | 1 | 990000 |
| 21 | ಧಾರವಾಡ | 1 | 990000 |
| 22 | ಗದಗ | 1 | 990000 |
| 23 | ಹಾವೇರಿ | 1 | 990000 |
| 24 | ಉತ್ತರ ಕನ್ನಡ | 1 | 990000 |
| 25 | ಬೀದರ್ | 1 | 990000 |
| 26 | ಬಳ್ಳಾರಿ | 1 | 990000 |
| 27 | ರಾಯಚೂರು | 1 | 990000 |
| 28 | ಕಲಬುರ್ಗಿ | 1 | 990000 |
| 29 | ಯಾದಗಿರಿ | 1 | 990000 |
| 30 | ಕೊಪ್ಪಳ | 1 | 990000 |
| | **ಒಟ್ಟು** | **30** | **29820000.00** |

ಟ್ಟು (ಎರಡು ಕೋಟಿ ತೊಂಬತ್ತೆಂಟು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)

P.Devasahayam 3/5/017

(ಪಿ.ದೇವಸಹಾಯಂ)

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

3.5.17

Su(Shashi)ZP Adhy. Honorarium